'ಇನ್ ಮೇಲೆ ನಿನ್ನ ರೂಮು ನೀನೇ ಕ್ಲೀನ್ ಮಾಡ್ಕೊ' ಎಂದರು.

ಸೋಮು ತನ್ನ ಕೋಣೆಯನ್ನು ನೋಡಿದ. ಮಂಚದ ಮೇಲೆ ಸರಿಯಾಗಿ ಮಡಿಸಿ ಇಟ್ಟಿಲ್ಲದ ಹೊದಿಕೆ. ಅದರ ಮೇಲೆ ಸ್ಕೂಲ್ ಬ್ಯಾಗ್. ಅಲ್ಲಲ್ಲಿ ಅರ್ಧ ತೆರೆದುಕೊಂಡ ಪುಸ್ತಕಗಳು. ನೆಲದ ಮೇಲೆ ಕ್ರಿಕೆಟ್ ಬ್ಯಾಟ್, ಕ್ರೇಯಾನ್ ಚೂರುಗಳು. ಡ್ರಾಯಿಂಗ್ ಪುಸ್ತಕ. ಏನುಂಟು ಏನಿಲ್ಲ? ಆಮೇಲೆ ತೆಗೆದಿಟ್ಟರಾಯಿತು ಎಂದುಕೊಂಡು ಹೊರಗೆ ಓಡಿಹೋದ. ಆಟಕ್ಕೆ ಯಾರೂ ಸಿಗಲಿಲ್ಲ. ಊರಹೊರಗೆ ಒಂದು ಮಾವಿನಮರ. ಅದರ ಕೆಳಗೆ ಒಂದು ಕಲ್ಲುಬೆಂಚು. ಅದರ ಮೇಲೆ ಕುಳಿತ. ಗಾಳಿ ಚೆನ್ನಾಗಿ ಬೀಸುತ್ತಿತ್ತು. ಸೋಮು ಎರಡೂ ಕೈ ಚಾಚಿ ಆಕಳಿಸುತ್ತಾ ಮೈಮುರಿದ.

ಅಷ್ಟರಲ್ಲಿ ಒಂದು ನಾಯಿ ಅಲ್ಲಿಗೆ ಓಡಿಬಂತು. ನಾಯಿ ಯಾಕೆ ಯಾವಾಗಲೂ ಓಡುತ್ತಲೇ ಇರುತ್ತದೆ? ನಡೆಯುವುದಿಲ್ಲ?

'ಏನು ನಾಯಿ ರಾಯರೆ? ಅರ್ಜೆಂಟಾಗಿ ಓಡ್ತಾ ಇದೀರಿ. ಭಾರೀ ತುರ್ತು ಕೆಲಸಾನೋ?' ಎಂದ.

'ಹೇಳುವುದಕ್ಕೂ ಕೇಳುವುದಕ್ಕೂ ಸಮಯವಿಲ್ಲ' ಎನ್ನುತ್ತಾ ನಾಯಿ ಓಡಿಹೋಯಿತು.

ಯಾವುದೋ ಸಿನಿಮಾದಲ್ಲಿ ಆ ಮಾತು ಕೇಳಿದ್ದು ಜ್ಞಾಪಕ. ಥೋ... ನೆನಪಾಗುತ್ತಿಲ್ಲ.

ನೆಲ ನೋಡಿದ. ಗೊದ್ದಗಳ ಒಂದು ಸಾಲು. ಲಟು ಪುಟು ಓಡುತ್ತಿದ್ದವು. ಇವಕ್ಕೇನಪ್ಪಾ ಇಂಥಾ ಅರ್ಜೆಂಟು? ಎಂದು ಅವುಗಳ ಸಾಲನ್ನೇ ಅನುಸರಿಸಿದ. ಎಲ್ಲ ಗೊದ್ದಗಳೂ ಒಂದೊಂದು ಕಾಳು ಹಿಡಿದುಕೊಂಡು ಒಂದು ಗೂಡಿನೊಳಗೆ ಹೋಗುತ್ತಿದ್ದವು. ನಾನೂ ಒಂದು ಗೊದ್ದವಾಗಿದ್ದರೆ ಆ ಗೂಡಿನ ಒಳಗೆ ಹೇಗಿದೆ ಅಂತ ನೋಡಬಹುದಿತ್ತು ಅಂದುಕೊಂಡ.

ಆ ಕ್ಷಣದಲ್ಲಿ ಅವನೊಂದು ಗೊದ್ದವಾಗಿಬಿಟ್ಟ. ತಾನೂ ಸಾಲಿನಲ್ಲಿ ಸೇರಿಕೊಂಡು ಗೂಡಿನೊಳಗೆ ಹೋದ. ಅಲ್ಲಿ ಕತ್ತಲಿದ್ದರೂ ಅವನಿಗೆ ಎಲ್ಲ ಕಾಣುತ್ತಿತ್ತು. ಒಳಗೆ ಅಂಕು ಡೊಂಕಿನ ದಾರಿ. ಸ್ವಲ್ಪ ದೂರ ಹೋದ ಮೇಲೆ ಒಂದು ಎತ್ತರದ ಪೀಠದಲ್ಲಿ ಗೊದ್ದದ ರಾಣಿ ಕೂತಿದ್ದಳು. ಸುತ್ತ ಗೊದ್ದಗಳು ಕಾಳಿನ ರಾಶಿ ಒಟ್ಟುತ್ತಿದ್ದವು.

'ಯಾಕೆ ಇಷ್ಟೊಂದು ಸಂಗ್ರಹ?' ಎಂದ.

'ಮಳೆಗಾಲ ಹತ್ತಿರ ಬಂತಲ್ಲ? ಅದಕ್ಕೆ' ಎಂದಿತು ಒಂದು ಗೊದ್ದ.

ಅಷ್ಟರಲ್ಲಿ ರಾಣಿ ಗೊದ್ದ ಇವನನ್ನು ನೋಡಿತು.

'ಎಲ್ಲಿ ಬರೀ ಬಾಯಲ್ಲಿ ಬಂದಿದೀಯಲ್ಲ? ಕಾಳು ಎಲ್ಲಿ?' ಎಂದು ಗದರಿಸಿತು.

ಸೋಮು ಹೆದರಿಕೊಂಡು, 'ಬೆ ಬ್ಬೆ ಬ್ಬೆ' ಎಂದ.

'ಹೋಗು ಕಾಳು ತಗೊಂಡು ಬಾ. ಸೋಮಾರಿಗೆ ಇಲ್ಲಿ ಜಾಗವಿಲ್ಲ' ಎಂದತು ರಾಣಿ.

ಸೋಮು ಹೊರಗೆ ಬಂದ. ಬಂದ ಕೂಡಲೆ ಮತ್ತೆ ಹುಡುಗನಾಗಿಬಿಟ್ಟ.

'ಅಬ್ಬ! ಆ ರಾಣೀನ ನೋಡಿದರೆ ಅಮ್ಮನ್ನ ನೋಡಿದ ಹಾಗೇ ಆಯ್ತು!' ಎಂದುಕೊಂಡು ಸುತ್ತ ಮುತ್ತ ನೋಡಿದ.

ಅಷ್ಟರಲ್ಲಿ ಒಂದು ಜೇನುಹುಳ ಗುಂಯ್ ಎಂದು ಶಬ್ದ ಮಾಡಿಕೊಳ್ಳುತ್ತಾ ಅಲ್ಲಿಗೆ ಬಂದಿತು. ಅಬ್ಬ, ಏನು ವೇಗ, ಏನು ಆತುರ! ತಲೆ ಎತ್ತಿ ನೋಡಿದ. ಅಲ್ಲೊಂದು ಜೇನು ಗೂಡು. ಎಷ್ಟೋ ಜೇನುಹುಳುಗಳು ಭರ್ರೆಂದು ಬರುತ್ತಿದ್ದವು, ಮತ್ತೆ ಭರ್ರೆಂದು ಹಾರಿಹೋಗುತ್ತಿದ್ದವು. ನಾನೂ ಒಂದು ಜೇನುಹುಳವಾಗಿದ್ದರೆ ಆ ಗೂಡಿನ ಒಳಗೆ ಹೇಗಿದೆ ಅಂತ ನೋಡಬಹುದಿತ್ತು ಅಂದುಕೊಂಡ.

ಆ ಕ್ಷಣದಲ್ಲಿ ಅವನೊಂದು ಜೇನುಹುಳವಾಗಿಬಿಟ್ಟ. ತಾನೂ ರೆಕ್ಕೆ ಬಡಿಯುತ್ತಾ ಭರ್ರೆಂದು ಜೇನುಗೂಡಿನ ಬಳಿಗೆ ಹಾರಿದ. ಅದೊಂದು ಕಾರ್ಖಾನೆಯ ಹಾಗಿತ್ತು. ಅರ್ಧಚಂದ್ರಾಕಾರದ ಆ